## ತೀರ್ಥ ಪ್ರಬಂಧದಿಂದ ಗೋದಾವರಿ ನದಿಯ ವರ್ಣನೆ

ಶ್ರೀಮಾನ್ ಷಣ್ಮುಖ ಪಾಟಿಲರೂ ತಮ್ಮ ಬಾಸರ ಸರಸ್ವತೀ ಕ್ಷೇತ್ರದ ಬಗ್ಗೆ ಹಾಗೂ ಗೋದಾವರಿ ನದಿಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡಿರುವರು. ಗೋದಾವರಿ ನದಿಯು ಎಷ್ಟು ಪವಿತ್ರವಾದುದು, ಅದರ ಮಹಿಮೆ ಎಂಥಹುದು ಎಂಬುದನ್ನು ಶ್ರೀ ವಾದಿರಾಜರು ತಮ್ಮ ತೀರ್ಥ ಪ್ರಬಂಧದಲ್ಲಿ ಬಹಳ ಚೆನ್ನಾಗಿ, ವಿಸ್ತಾರವಾಗಿ ವಿವರಿಸಿರುವರು.

ಬಾಸರ ಕ್ಷೇತ್ರವು ಆಂಧ್ರ ಪ್ರದೇಶದ ಪ್ರಸಿದ್ಧಿವಾದ ಯಾತ್ರಾಸ್ಥಳ. ಇಲ್ಲಿ ಶ್ರೀ ಮಹಾ ಸರಸ್ವತೀ ದೇವಾಲಯವಿದೆ. ಮಕ್ಕಳಿಗೆ ಅಕ್ಷರ ಅಭ್ಯಾಸವನ್ನು ಪ್ರಾರಂಭ ಮಾಡಿಸುವವರು ಇಲ್ಲಿ ಬರುವರು. ಇಲ್ಲಿನ ದೇವಿಯನ್ನು ಭಕ್ತಿಯಿಂದ ಪೂಜಿಸಿದವಗೆ ಜ್ಞಾನವು ಉಂಟಾಗುವುದು.ಬಳಪ, ಸ್ಲೇಟುಗಳು ಪುಸ್ತಕಗಳು ಸಿಗುವುವು. ಸರಸ್ವತೀ ದೇವಾಲಯಗಳಲ್ಲಿ ಇದು ಒಂದು.

ಅದರ ಬಗ್ಗೆ ಒಂದು ಲೇಖನ ಇಲ್ಲಿದೆ. ಗೋದಾವರಿ ನದಿಯ ಉದ್ಗಮ ಸ್ಥಾನದ ಮಾರ್ಗ ಮುಂಬೈಯಿಂದ ದಿಲ್ಲಿಗೆ ಹೋಗುವ ರೈಲು ಮಾರ್ಗದಲ್ಲಿ ನಾಸಿಕ್ ರೋಡ್ ಎಂಬ ಪ್ರಸಿದ್ಧ ಸ್ಟೇಷನ್ ಸಿಗುತ್ತದೆ. ಇಲ್ಲಿಂದ 17 ಕಿಲೋಮೀಟರ್ ದೂರದಲ್ಲಿದೆ. ತ್ರ್ಯಂಬಕ ಪರ್ವತ/ಇಲ್ಲೇ ಗೋದಾವರಿ ನದಿಯು ಹುಟ್ಟುವುದು.
ಈ ನದಿಯು ಸುಮಾರು 900 ಮೈಲುಗಳಷ್ಟು ಹರಿದು ರಾಜಮಹೇಂದ್ರದ ಹತ್ತಿರ ಸಮುದ್ರವನ್ನು ಸೇರುತ್ತದೆ.

ಈ ನದಿಯ ಉಗಮದ ವಿಷಯವಾಗಿ ಸ್ಕಂದ ಪುರಾಣದಲ್ಲಿ ಒಂದು ಕಥೆ ಇದೆ . ದ್ವಾಪರ ಯುಗದ ಅಂತ್ಯದಲ್ಲಿ 12 ವರುಷಗಳು ಅನಾವೃಷ್ಟಿಯಾಯಿತಂತೆ. ಅನೇಕ ಋಷಿಗಳು ಗೌತಮರ ಆಶ್ರಮದಲ್ಲಿಆಶ್ರಯ ಪಡೆದರು. ಗೌತಮರ ತಪಸ್ಸಿನ ಫಲವಾಗಿ ವರ್ಷ ವರ್ಷ ಸರಿಯಾಗಿ ಬಿತ್ತನೆಯಾಗಿ ಸುಭೀಕ್ಷವಾಗಿದ್ದವು. ದವಸ ಧಾನ್ಯಗಳು ಸಮೃದ್ಧಿಯಾಗಿದ್ದವು. ಅನೇಕ ಋಷಿಗಳು, ಬ್ರಾಹ್ಮಣರು ಸುಖವಾಗಿದ್ದರು. ದುರ್ಭಿಕ್ಷ ಕಾಲವು ತೀರಿಕೊಂಡಾದರೂ ಋಷಿಗಳು ಜಾಗ ಖಾಲಿ ಮಾಡುವ ಸೂಚನೆಗಳು ಕಂಡುಬರಲಿಲ್ಲ. ಪ್ರಾಯಶಃ ಹೊರಡಲು ಇಚ್ಛೆ ವ್ಯಕ್ತಪಡಿಸಿದ್ದರೂ ಕೂಡ ಗೌತಮರು ಆಶ್ರಮವನ್ನು ಬಿಟ್ಟು ಹೋಗಲು ಅನುಮತಿಕೊಡಲಿಲ್ಲ. ಆದರಿಂದ ಎಲ್ಲ ಋಷಿಗಳು ಅಲ್ಲೆ ಇದ್ದುಬಿಟ್ಟರು. ಋಷಿಗಳಿಗೆ ಅನ್ನಪಾನಾದಿಗಳನ್ನು ಮಾಡಿದ ಫಲದಿಂದ ಪುಣ್ಯ ಬಂದಿರುವುದಾಗಿ ಭಾವಿಸಿ ಅವರನ್ನು ಹೊರಗೆ ಹೋಗಗೊಡದಿರಲು ಕಾರಣವಾಯಿತು. ಹೀಗಿರುವಾಗ ಈಶ್ವರನ ತಲೆಯ ಮೇಲೆ ಕುಳಿತಿರುವ ಗಂಗೆಯನ್ನು ಕೆಳಗೆ ಇಳಿಸಬೇಕೇಂದು ಸವತಿ ಮಾತ್ಸರ್ಯದಿಂದ ಪಾರ್ವತಿಯು ಗಣೇಶನನ್ನು ಈ ಕಾರ್ಯಕ್ಕೆ ನಿಯಮಿಸಿದಳು. ಮಾತೃಭಕ್ತನು, ಉಪಾಯ ಚತುರನೂ ಆದ ಗಣೇಶನು,ಬ್ರಹ್ಮಚಾರಿಯ ವೇಷವನ್ನು ತಾಳಿ ಗೌತಮರ ಅಶ್ರಮದ ಹತ್ತಿರ ಬಂದು ಅಲ್ಲಿದ್ದ ಋಷಿಗಳನ್ನು ಕುರಿತು ಈ ರೀತಿ ಹೇಳಿದನು.

' ಎಲೈ ಋಷಿಗಳಿರಾ! ನೀವು ಗೌತಮರ ಅನ್ನವನ್ನು ಉಂಡು, ನಿಮ್ಮ ಬ್ರಹ್ಮ ತೇಜಸ್ಸನ್ನು ಹಾಳು ಮಾಡಿಕೊಳ್ಳುತ್ತಿರುವಿರಿ. ಆದ್ದುದರಿಂದ ಯಾವುದಾದರೂ ಉಪಾಯವನ್ನು ಮಾಡಿ ನೀವು ಹೊರಡಿರಿ. ಬೇಕಾದರೆ ನಾನೊಂದು ಉಪಾಯವನ್ನು ಹೇಳಲು ಸಿದ್ಧನಿದ್ದೇನೆ. ಕೇಳಿರಿ. ನೀವು ನಿಮ್ಮ ತಪೋಶಕ್ತಿಯಿಂದ ಒಂದು ಮಾಯಾ ಗೋವನ್ನು ನಿರ್ಮಿಸಿರಿ. ಅದು ಬಹಳ ಬಡಕಲುಆಗಿಯೂ, ಮುಟ್ಟಿದರೆ, ಬೆದರಿಸಿದರೆ ಬಿದ್ದು ಸತ್ತು ಹೋಗುವಹಾಗೆ ಇರಲಿ. ಅದು ಗೌತಮರು ಸ್ನಾನವನ್ನು ಮಾಡಿಕೊಂಡು ಬರುವ ಹಾದಿಯಲ್ಲಿ ಹುಲುಸಾಗಿ ಬೆಳೆದಿರುವ ಧಾನ್ಯವನ್ನು ತಿನ್ನುತ್ತಿರಲಿ. ಗೌತಮರು ಅದನ್ನು ನೋಡಿ ಬೆದರಿಲಿಸಿಕ್ಕೋಸ್ಕರವಾಗಿ ಒಂದಿಷ್ಟು ನೀರನ್ನು ಪ್ರೋಕ್ಷಿಸುತ್ತಾರೆ. ಅದು ಬಿದ್ದು ಸತ್ತು ಹೋಗುತ್ತದೆ. ಆಗ ನೀವು ಈ ಗೋವನ್ನು ಬದುಕಿಸುವವರೆಗೆ ಗೋಹತ್ಯಾ ಮಾಡಿದ ನಿಮ್ಮಲ್ಲಿ ನಾವು ಊಟವನ್ನು ಮಾಡುವುದಿಲ್ಲವೆಂದು ಅಲ್ಲಿಂದ ಹೊರಡಿ' ಎಂದನು. ಗಣೇಶನ ಈ ಉಪದೇಶದಿಂದಲೂ, ಕಾಲಬಲದಿಂದಲೂ, ಬ್ರಹ್ಮರಿಗೆ ದುರ್ಬುದ್ಧಿ ಯುಂಟಾಗಿ ಅವರುಗಳು ಗಣೇಶನು ಹೇಳಿದಂತೆ ಮಾಡಿ ' ಗೋಹತ್ಯಾ ಮಾಡಿದ ನಿಮ್ಮ ಅಶ್ರಮದಲ್ಲಿ ಇರುವುದಿಲ್ಲ' ವೆಂದು ಹೇಳಿ ಅಲ್ಲಿಂದ

ಹೊರಟರು. ಗೌತಮರು ಅನಂತರ ಬಹಳ ಹೊತ್ತು ಯೋಚನೆ ಮಾಡಿದರು. ಇದು ಬ್ರಾಹ್ಮಣರ ಕುತಂತ್ರ ವೆಂದು ತಮ್ಮ ತಪಸ್ಸಿನ ಪ್ರಭಾವದಿಂದ ತಿಳಿದು ನಿಮ್ಮ ಜ್ಞಾನವೆಲ್ಲವೂ ತ್ರಾಸಹೊಂದಲಿ ಎಂದು ಶಪಿಸಿ, ಗೋಹತ್ಯ ಅಪವಾದವನ್ನು ಪರಿಹರಿಸಿಕೊಳ್ಳಲು ಈಶ್ವರನನ್ನು ಮೆಚ್ಚಿಸಿ, ಈಶ್ವರನ ತಲೆಯಿಂದ ಗಂಗೆಯನ್ನು ಹರಿಸಿ ,ಆ ಗಂಗೆಯ ನೀರಿನಿಂದ ಗೋವನ್ನು ಬದುಕಿಸಿದರು. ಅದೇ ಗೋದಾವರಿ ನದಿಯಾಯಿತು.

ಹೀಗೆ (ಗೋದ= ಗೋವಿಗೆ ಪ್ರಾಣವನ್ನು ಕೊಟ್ಟಿರುವ , ವಾರಿ= ನೀರು) ಗೋದಾವರಿ ಎಂದು ಪ್ರಸಿದ್ಧಿ ಹೊಂದಿತು. ಶ್ರೀ ವಾದಿರಾಜರು ಗೋದಾವರಿ ನದಿಯನ್ನು ತಮ್ಮ ತೀರ್ಥ ಪ್ರಬಂಧದಲ್ಲಿ 3 ಶ್ಲೋಕಗಳಿಂದ ವರ್ಣಿಸುತ್ತಾರೆ. ಅವುಗಳನ್ನು ನೋಡೋಣ.

ವಿಪ್ರರ್ಷಿ ದೇವಕುಲ ಸಂಕುಲ ತೀರ ಯುಗ್ಮಾ
ವಿದ್ರಾವಿತಾಘತೃಣರೇಣುಕಣಾ ಸ್ವವಾತೈಃ!
ಸ್ವಾದೂದಕ ಪ್ರಶಮಿತಾಖಿಲ ಲೋಕಶೋಕಾ
ಗೋದಾವರಿ ಶುಭಕರೀ ಸರಿದುದ್ಧರೇನ್ನಃ!!

ವಿಪ್ರರ್ಷಿ ದೇವಕುಲ ಸಂಕುಲ ತೀರ ಯುಗ್ಮಾ= ಬ್ರಾಹ್ಮಣರು, ಋಷಿಗಳು, ದೇವತೆಗಳು ಮತ್ತು ದೇವಾಲಯಗಳಿಂದ ವ್ಯಾಪ್ತವಾದ ಎರಡು ದಡಗಳುಳ್ಳ,
ಸ್ವವಾತೈಃ= ತನ್ನ ಗಾಳಿಗಳಿಂದ,
ವಿದ್ರಾವಿತಾಘತೃಣರೇಣುಕಣಾ= ದೂರಮಾಡಲ್ಪಟ್ಟ ಪಾಪಗಳೆಂಬ ಹುಲ್ಲು, ಧೂಳು ಮತ್ತು ಮರಳುಕಲ್ಲುಗಳುಳ್ಳ,
ಸ್ವಾದೂದಕ + ನಿರ್ಮಲವಾದ ನೀರುಗಳಿಂದ,
ಪ್ರಶಮಿತಾಖಿಲ ಲೋಕಶೋಕಾ= ನಾಶಗೊಳಿಸಲ್ಪಟ್ಟ ಸಮಸ್ತ ಜನರ ಶೋಕವುಳ್ಳ,
ಶುಭಕರೀ ಗೋದಾವರೀ ಸರಿತ್ = ಮಂಗಳಕರವಾದ ಗೋದಾವರಿಯು.
ನಃ= ನಮ್ಮನ್ನು (ಸಂಸಾರಾತ್– ಸಂಸಾರದ ದೆಸೆಯಿಂದ)
ಉದ್ಧರೇತ್= ಉದ್ಧರಿಸಲಿ.

ತಾತ್ಪರ್ಯ: ಗೋದಾವರಿ ನದಿಯ ಎರಡು ದಡಗಳಲ್ಲಿ ಬ್ರಾಹ್ಮಣರು, ಋಷಿಗಳು ನಿಬಿಡವಾಗಿ ವಾಸಿಸುತ್ತಾರೆ. ಹಾಗೆಯೇ ನದಿಯ ಇಕ್ಕೆಲಗಳಲ್ಲಿಯೂ ದೇವತೆಗಳು, ದೇವ ಮಂದಿರಗಳೂ ಕಂಗೊಳಿಸುತ್ತಿವೆ. ಗೋದಾವರೀಯ ತನ್ನ ಮೇಲೆ ಹರಿದು ಬರುತ್ತಿರುವ ಗಾಳಿಗಳಿಂದ ಹುಲ್ಲು,ಧೂಳು ಮತ್ತು ಕಲ್ಲು ಚೂರುಗಳನ್ನು ದೂರಕ್ಕೆ ಎಸೆಯುತ್ತದೆ. ಇವೆಲ್ಲಾ ಹಾರಿಹೋಗುತ್ತಿರುವುದನ್ನು ನೋಡಿದರೆ ಆ ಗಾಳಿಯು ಗೋದಾವರಿಯ ಸ್ನಾನದಿಂದ ಪುನೀತರಾದ ಭಕ್ತರ ಪಾಪಗಳನ್ನು ಪರಿಹರಿಸುವಂತೆ ಕಾಣುತ್ತದೆ. ಸಿಹಿಯಾದ ಗೋದಾವರಿ ನದಿಯ ನೀರಿನಿಂದ ಎಲ್ಲಾ ಜನರ ಒಳಹೊರಗಿನ ತಾಪಗಳು ನಾಶಹೊಂದುತ್ತವೆ. ಇಂತಹ ಮಂಗಳಕರವಾದ ಗೋದಾವರಿ ನದಿಯು ನಮ್ಮನ್ನು ಸಂಸಾರದಿಂದ ಉದ್ಧರಿಸಬೇಕು.

ಅಂಹಾಂಸಿ ಹಂಸಿ ಸತತಂ ಕಿಲ ರಾಶಿ ಪುಣ್ಯಂ
ಸಿಂಹಸ್ಥಿತೇ ಸುರಗುರೌ ನ ತದಂಬ ಯಾಚೇ!
ಗೋದೇ ಸಮಸ್ತ ಫಲದೇ ದಿನ ಕೃಷ್ಣ ಪಾದೇ
ಭಕ್ತಿ ವಿರಕ್ತಿ ಮಿತರತ್ರ ಪರತ್ರ ಮುಕ್ತಿಂ !!

ಹೇ ಗೋದೇ – ಎಲೈ ಗೋದಾವರಿಯೆ!
ತ್ವಂ– ನೀನು
ಸತತಂ_ ಯಾವಾಗಲೂ

ಅಂಹಾಂಸಿ= (ಜನರ) ಪಾಪಗಳನ್ನು
ಹಂಸಿ ಕಿಲ = ನಾಶಮಾಡುತ್ತೀಯಷ್ಟೇ!
ಪುಣ್ಯಂ ರಾಸಿ (ಕಿಲ)= ಪುಣ್ಯವನ್ನು ಕೊಡುತ್ತೀಯಷ್ಟೇ!
ಹೇ ಅಂಬ= ಎಲೈ ಅಮ್ಮ!
ಸುರಗುರೌ ಸಿಂಹಸ್ಥಿತೇ=ಬೃಹಸ್ಪತಾಚಾರ್ಯರು ಸಿಂಹರಾಶಿಯಲ್ಲಿರುವಾಗ
ಅಹಂ= ನಾನು
ತತ್= ಆಪಾಪ ಪರಿಹಾರ ಮತ್ತು ಪುಣ್ಯ ಸಂಪಾದನೆ ಎರಡನೂ
ನ ಯಾಚೇ= ಬೇಡುವುದಿಲ್ಲ,
ಕಿಂತು=ಆದರೆ
ಹೇ ಸಮಸ್ತ ಫಲದೇ! ಗೊದೇ= ಅಲೈ ಸ್ವರ್ಗ ಮೋಕ್ಷಾದಿ ಸಮಸ್ತ ಪುರುಷಾರ್ಥಪ್ರದಳಾದ ಗೋದಾವರಿಯೇ!
ಕೃಷ್ಣಪಾದೇ ಭಕ್ತಿಂ= ಕೃಷ್ಣನ ಪಾದಕಮಲದಲ್ಲಿ ಭಕ್ತಿಯನ್ನು,
ಇತರತ್ರ= ಸಂಸಾರದಲ್ಲಿ
ವಿರಕ್ತಿಂ+ ವೈರಾಗ್ಯವನ್ನು
ಪರತ್ರ= ಪರಲೋಕದಲ್ಲಿ
ಮುಕ್ತಿಂಚ= ಮುಕ್ತಿಯನ್ನೂ
ದಿಶ= ಕೊಡು
ತಾತ್ಪರ್ಯ: ಅಮ್ಮಾ ಗೋದಾವರಿ! ಗುರುವು ಸಿಂಹರಾಶಿಯಲ್ಲಿರುವಾಗ ನಿನ್ನಲ್ಲಿ ಸ್ನಾನ ಮಾಡಿದವರಿಗೆ ವಿಶೇಷವಾದ ಪುಣ್ಯ ಬರುವುದೆಂದು ನಾನು ಕೇಳಿದ್ದೇನೆ. ಆದರೆ ನಾನು ಗುರುವು ಸಿಂರಾಶಿಯಲ್ಲಿರುವಾಗ ನಿನ್ನಲ್ಲಿ ಸ್ನಾನ ಮಾಡಿ ನನ್ನ ಪಾಪಗಳನ್ನು ವಿಶೇಷತಃ ನಾಶ ಮಾಡಿ ಪುಣ್ಯ ಕೊಡೆಂದು ಬೇಡುವುದಿಲ್ಲ. ಏಕೆಂದರೆ, ಭಕ್ತಿಯಿಂದ ಸಹಿತರಾಗಿ ನಿನ್ನಲ್ಲಿ ಸ್ನಾನ ಮಾಡುವ ಯಾತ್ರಿಕರಿಗೆ ಆ ಫಲವು ಯಾವಾಗಲೂ ಸಿಗುತ್ತದೆ. ಮದುವೆಮನೆಯಲ್ಲಿ ಯಾರೂ ಹೋಗಿ ಗಂಗೆಯನ್ನು ಬೇಡುವುದಿಲ್ಲವಷ್ಟೆ? ನೀನು ಹೆಚ್ಚು ಪ್ರಸನ್ನಳಾಗಿದ್ದಾಗ ನಿನ್ನಲ್ಲಿ ನಾನು ದೊಡ್ಡ ಫಲವನ್ನೇ ಬೇಡುತ್ತೇನೆ, ನೀನು ನನಗೆ ಕೃಷ್ಣನ ಪಾದದಲ್ಲಿ ಭಕ್ತಿಯನ್ನೂ,ಸಂಸಾರದಲ್ಲಿ ವೈರಾಗ್ಯವನ್ನೂ ಕೊನೆಗೆ ಪರಲೋಕದಲ್ಲಿ ಮೋಕ್ಷವನ್ನು ಕೊಡು. ಇತರರು ಕೊಡಲಾಗದ ಈ ಮಹಾ ಫಲವನ್ನು ಕೊಡಲು ನೀನೆ ಸಮರ್ಥಳು ಎಂದು ಶ್ರೀ ವಾದಿರಾಜ ತೀರ್ಥರು ಗೋದಾವರಿನದಿಯನ್ನು ಅನನ್ಯ ಭಾವದಿಂದ ಪ್ರಾರ್ಥಿಸಿದ್ದಾರೆ.

ಅದೌ ಧವಲಗಂಗಾ ಯಾ ಗಂಗಾದ್ವಾರಾಭಿಧಾಂತರೇ!
ಪಶ್ಚಾತ್ ಕುಶಾವರ್ತಪದಾ ಗೋದಾ ಮೋದಾಯ ಸಾ ಸದಾ!

ಯಾ- ಯಾವ ಗೋದಾವರಿನದಿಯು,
ಅದೌ=ಮೊದಲು,
ಧವಲಗಂಗಾ= ಧವಲಗಂಗೆಯಾಗಿ
ವರ್ತಲೇ=ಇದ್ದಾಳೆ
ಅಂತರೇ= ಮಧ್ಯದಲ್ಲಿ
ಗಂಗದ್ವಾರಾಭಿಧಾ-ಗಂಗದ್ವಾರಾವೆಂಬಹೆಸರುವುಳ್ಳವಳಾಗಿದ್ದಾಳೋ
ಪಶ್ಚಾತ್=ಅನಂತರ
ಕುಶಾವರ್ತಪದಾ=ಕುಶಾವರ್ತ ಎಂಬ ಹೆಸರುಳ್ಳವಳಾಗಿದ್ದಾಳೋ
ಸಾ ಗೋದಾ= ಅಂತಹ ಗೋದಾವರಿಯು
ಸದಾ= ಯಾವಾಗಲೂ
ಮೋದಾಯ ಸ್ಯಾತ್=ಸಂತೋಷಕ್ಕೋಸ್ಕರ ಆಗಲಿ.

ತಾತ್ಪರ್ಯ: ಯಾವ ಗೋದಾವರಿ ನದಿಯು ತ್ರ್ಯಂಬಕ ಪರ್ವತದ ಶಿಖರದಲ್ಲಿ ಸೂಕ್ಷ್ಮ ಸರೋವರ ರೂಪದಿಂದ ಧವಲಗಂಗಾ ಎಂದೂ,ಮಧ್ಯದಲ್ಲಿ ಗಂಗಾದ್ವಾರವೆಂದೂ, ಕೊನೆಗೆ ಕುಶಾವರ್ತಎಂದೂ ಹೆಸರುಗೊಂಡಿದೆಯೋ ಅಂತಹ ಗೋದಾವರಿಯು ಯಾವಾಗಲೂ ನಮಗೆ ಸಂತೋಷಪ್ರದವಾಗಲಿ ಎಂದು ಗೋದಾವರಿಯನ್ನು ಬೇಡಿದ್ದಾರೆ. ಇಲ್ಲಿ ತಿಳಿಯಬೇಕಾದ ವಿಷಯವೂ ಹೀಗಿದೆ:

ಗೌತಮರ ತಪಸ್ಸಿಗೆ ಸಂತುಷ್ಟರಾಗಿ ಈಶ್ವರನು ತನ್ನ ಜಟೆಯ ಒಂದು ಭಾಗವನ್ನೇ ಕಿತ್ತುಕೊಟ್ಟು ಗೋದಾವರಿ ಎಂಬ ಹೆಸರಿನ ಗಂಗೆಯನ್ನು ಕಳುಹಿಸಿ ಕೊಟ್ಟಾಗ ಅವಳು ಮೊದಲು ತ್ರ್ಯಂಬಕ ಪರ್ವತದಲ್ಲಿ ಪ್ರಕಟವಾದಳು. ಅಲ್ಲಿರುವ ಚಿಕ್ಕ ಸರೋವರವು ಧವಲಗಂಗಾ ಎಂದು ಹೆಸರಿನದು. ಅದೇ ಗೋದಾವರಿಯು ಅಲ್ಲಿಂದ ಗುಪ್ತವಾಗಿ ಹರಿದು ಬ್ರಹ್ಮಗಿರಿಯ ಶಿಖರದ ಬುಡದಲ್ಲಿ ವರಾಹ ನರಸಿಂಹ ಎಂಬ ಎರಡು ಕುಂಡಗಳಲ್ಲಿ ಪ್ರಕಟವಾದಳು. ಇದನ್ನೇ ಗಂಗಾದ್ವಾರ ಎಂದು ಹೇಳುತ್ತಾರೆ. ಅಲ್ಲಿಂದ ಮುಂದೆ ಗೋದಾವರಿಯು ಪುನಃ ಗುಪ್ತಗಾಮಿನಿಯಾಗಿ ಕುಶಾವರ್ತವೆಂಬಲ್ಲಿ ಪ್ರಕಟವಾದಳು. ಗೌತಮ ಋಷಿಗಳು ದರ್ಭೆಗಳಿಂದ ಗೋದಾವರಿಯ ಪ್ರವಾಹವನ್ನು ತಡೆದು ಸತ್ತ ಗೋವಿನ ಮೇಲೆ ಹರಿಸಿದ ಸ್ಥಳವೇ ಕುಶಾವರ್ತವೆನಿಸಿತು, ಕುಶಃ ಆವರ್ತ್ಯಂತೇ ಇತಿ ಕುಶಾವರ್ತ, ಶ್ರೀ ವಾದಿರಾಜರು ತಾವು ಗೋದಾವರಿಯ ಉದ್ಗಮನದ ಈ ಮೂರು ಸ್ಥಳಗಳನ್ನು ನೋಡಿ ಅದರಂತೆ ವರ್ಣಿಸಿದ್ದಾರೆ, ಈ ಸ್ಥಳದಲ್ಲಿ ತ್ರ್ಯಂಬಕೇಶ್ವರ ದೇವಾಲಯವಿದೆ. ಅದು ನೋಡುವುದಕ್ಕೆ ಅರ್ಹವಾದುದು.

ಕೃಪೆ:
ಮೂಲ' ಶ್ರೀ ವಾದಿರಾಜ ತೀರ್ಥರು
ಅನುವಾದಕರು: ವಿದ್ವಾನ್ ಸಾಣೂರು ಭೀಮ ಭಟ್ಟರು

ಜಿ ಆರ್ ರಘುನಾಥ ರಾವ್
99 0101 4949